ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	137(921)
ಸದಸ್ಯರ ಹೆಸರು	ಡಾ॥ ಚಂದ್ರಶೇಖರ ಬಿ.ಪಾಟೀಲ್ (ಪದವೀಧರ ಕ್ಷೇತ್ರ)
ವಿಷಯ	ಕಲ್ಯಾಣ ಕರ್ನಾಟಕ ಭಾಗದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಕುರಿತು
ಉತ್ತರಿಸಬೇಕಾದ ದಿನಾಂಕ	10/03/2021
ಉತ್ತರಿಸುವ ಸಚಿವರು	ಕಂದಾಯ ಸಚಿವರು
ಪ್ರಶ್ನೆ	ಉತ್ತರ

ಅ) ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಾಲ ಬಾಧೆಗೆ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಾಲ ಬಾಧೆಯಿಂದ 366 ರೈತರು ಆತ್ಮಹತ್ಯೆ ಮಾಡಕೊಂಡಿದ್ದು, ಜಿಲ್ಲಾವಾರು ವಿವರ ಕೆಳಕಂಡಂತಿದೆ

ಕ್ರ. ಸಂ.	ಜಿಲ್ಲೆ	ಪರಿಹಾರ ವಿತರಣೆಗೆ ಅನುಮೋದನೆಗೊಂಡ ಪ್ರಕರಣಗಳ ಸಂಖ್ಯೆ
1.	ಬಳ್ಳಾರಿ	64
2.	ಬೀದರ್	100
3.	ರಾಯಚೂರು	10
4.	ಯಾದಗಿರಿ	21
5.	ಗುಲ್ಬರ್ಗಾ	62
6.	ಕೊಪ್ಪಳ	109
ಒಟ್ಟು		366

ಆ) ಸಾಲಬಾಧೆಯ ಸುಳಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡ ಕುಟುಂಬಗಳಿಗೆ ಸರ್ಕಾರ ಯಾವ ರೀತಿ ಸ್ಪಂದಿಸಿದೆ;

ಸಾಲ ಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಕ್ಕೆ ಸರ್ಕಾರದಿಂದ ಈ ಕೆಳಕಂಡ ಸೌಲಭ್ಯ ಒದಗಿಸುತ್ತಿದೆ.

1. ರೂ.5,00,000/-ಗಳ ಪರಿಹಾರವನ್ನು ನೀಡಲಾಗುತ್ತಿದೆ
2. ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಯಡಿ ಮಾಸಿಕ ರೂ.2000/-ಗಳ ಪಿಂಚಣಿ ನೀಡಲಾಗುತ್ತಿದೆ.
3. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಆರೋಗ್ಯ ಕಾರ್ಡ್ ನೀಡಲಾಗುತ್ತಿದೆ.
4. ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಸ್ನಾತಕೋತ್ತರ ಪದವಿಯ ಹಂತದವರೆಗೆ ಶಿಕ್ಷಣವನ್ನು ಮುಂದುವರಿಸಲು ಅನುವಾಗುವಂತೆ ಉಚಿತ ಶಿಕ್ಷಣ, ಹಾಸ್ಟೆಲ್ ಸೌಲಭ್ಯ ಅಥವಾ ತತ್ಸಮಾನ ಶಿಕ್ಷಣ ಮತ್ತು ವಸತಿ ವೆಚ್ಚದ ಮರುಪಾವತಿ ಮಾಡುವಂತೆ ಅನುಕೂಲ ಕಲ್ಪಿಸಲಾಗಿದೆ.

ಇ) ಆತ್ಮಹತ್ಯೆಗೆ ಶರಣಾದ ಎಷ್ಟು ಕುಟುಂಬಗಳಿಗೆ ಸರ್ಕಾರ ಪರಿಹಾರ ನೀಡಿದೆ;	ಕಳೆದ ಮೂರು ವರ್ಷಗಳಲ್ಲಿ 366 ಪ್ರಕರಣಗಳ ಪೈಕಿ ಆತ್ಮಹತ್ಯೆಗೆ ಒಳಗಾದ 357 ರೈತರ ಕುಟುಂಬಗಳಿಗೆ ಸರ್ಕಾರದಿಂದ ಪರಿಹಾರವನ್ನು ನೀಡಲಾಗಿದೆ. ಜಿಲ್ಲಾವಾರು ಮಾಹಿತಿ ಕೆಳಕಂಡಂತಿದೆ :

ಕ್ರ. ಸಂ.	ಜಿಲ್ಲೆ	ಪರಿಹಾರ ವಿತರಿಸಲಾದ ಪ್ರಕರಣಗಳ ಸಂಖ್ಯೆ
1.	ಬಳ್ಳಾರಿ	64
2.	ಬೀದರ್	100
3.	ರಾಯಚೂರು	05
4.	ಯಾದಗಿರಿ	21
5.	ಗುಲ್ಬರ್ಗಾ	62
6.	ಕೊಪ್ಪಳ	105
ಒಟ್ಟು		357

ಈ) ಆತ್ಮಹತ್ಯೆ ಮಾಡಿಕೊಂಡ ಎಷ್ಟು ರೈತರ ಕುಟುಂಬಗಳಿಗೆ ಇನ್ನೂ ಸರ್ಕಾರದಿಂದ ಪರಿಹಾರ ದೊರೆತಿರುವುದಿಲ್ಲ.	2020-21 ನೇ ಸಾಲಿನಲ್ಲಿ ರಾಯಚೂರು ಮತ್ತು ಕೊಪ್ಪಳ್ಳ ಜಿಲ್ಲೆಗೆ ಕ್ರಮವಾಗಿ ಒಟ್ಟು ರೂ. 65.00 ಲಕ್ಷ ಮತ್ತು ರೂ.70.00 ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು. ಎರಡು ಜಿಲ್ಲೆಗಳಲ್ಲಿ ಉಳಿದ 9 ಪ್ರಕರಣಗಳಲ್ಲಿ ಪರಿಹಾರ ವಿತ್ತರಣೆಗೆ ಕ್ರಮವಹಿಸಲಾಗಿದೆ.

ಸಂ. DSSP-LAQ-6/2021

(ಆರ್.ಅಶೋಕ)
ಕಂದಾಯ ಸಚಿವರು